

ನಾ ಅವತ್ತೇ ಸತ್ತುಹೋಗಿದ್ದೆ. ಬರಿ ಹೆಣ ಇಂದಿನವರೆಗೂ ಇರೋದು. ಅಪ್ಪನ್ನ ನೋಡಿದರೂ, ತಮ್ಮಂದಿರನ್ನ ನೋಡಿದರೂ ಭಯ ನಂಗೆ. ಮದುವೆ ಇಷ್ಟ ಇರಲಿಲ್ಲ. ಗಂಡಸರ ನೆರಳೇ ಬೇಡಿತ್ತು, ಇನ್ನ ಮದುವೆ? ಮುಂದೆ ಗಂಡನ ಜೊತೆ ಹೇಗೆ ಬಾಳಲಿ? ಅಪ್ಪನೆದುರು ಒಲ್ಲೆ ಎನ್ನದೇ ಮತ್ತೆ ಸಾವಿನ ಕುಣಿಕೆಗೆ ಕೊರಳೊಡ್ಡಿದ್ದೆ! ಸತ್ತ ದೇಹವಿದು ನಿಮಗೇನು ನೀಡೀತು... ಅಂತ ಬೆಳಗಿನವರೆಗೂ ಅತ್ತಿದ್ದಳು. ಅಂದಿನಿಂದ ಆಕೆ ಸಾಯುವವರೆಗೂ ಆ ಘಟನೆ ನೆನಪಾಗದ ಹಾಗೆ ಅವಳನ್ನು ಜೋಪಾನ ಮಾಡಿದ್ದೆ. ಅವಳಿಗಂತೂ ಆ ಕೊರಗು ಮನಸಲ್ಲಿ ಗುಂಗಿ ಹುಳವಾಗಿ ಕೊರಿತಾನೇ ಇತ್ತು. ಮಕ್ಕಳಾದ ಮೇಲೆ ಮರೆತಂತೆ ನಟಿಸಿದರೂ ಒಂಟಿ ಇದ್ರೆ ಜಗತ್ತು ಮರೆತೇ ಬಿಡ್ತಿದ್ಲು. ನೆಲ ನೋಡ್ತಾನೋ. ಆಕಾಶ ನೋಡ್ತಾನೋ ಇದ್ದು ಬಿಡ್ತಿದ್ಲು.

ಮಕ್ಕಳೆರಡಾದರೂ ಅವಳು ಮಗುವಾಗೇ ಇದ್ದಳು. ಅವಳು ಆ ಗರ್ಭಕೋಶದ ಆಪರೇಷನ್ ಆದಮೇಲೆ ಮೆತ್ತಗಾದಳು. ಅದು ಒಳಗೇ ನಂಜಾದಂಗಾಗಿ ನವೆದೇ ಹೋದಳು. ಅದು ನೆಪ ಅಷ್ಟೇ... ಅವಳ ಸಾವಿಗೆ ಕರಿಸಿದ್ದನ ನಯವಂಚಕತನವೇ ಕಾರಣ. ಅವಳಂತೂ ಹೋದಳು. ಊರಲ್ಲಿ ಇಲ್ಲದ ಸುದ್ದಿ ಹರಡಿ ಆಸ್ಪತ್ರೆ ಜನ ಬಂದು, ಪೊಲೀಸ್ ಬಂದು ನೋಡಿ, ನಂತರ ನಿಮ್ಮ ಹೆಸರು ಹೇಳಿ ಅವರ ಮಗಳು, ಆಪರೇಷನ್ ಸಮಸ್ಯೆ ಅಂದ ಮೇಲೆ ಸುಮ್ಮನೆ ಹೋದರು.

ಇರೋ ಈ ಪುಟಾಣಿ ಮಕ್ಕಳಲ್ಲಿ ಅವಳ ನೋಡ್ತಾ ಕೊನೆವರೆಗೂ ಹಿಂಗೇ ಹೋಗ್ತೀನಿ, ಆದರೆ ಅವಳಿಗಾದ ಅನ್ಯಾಯ ನಿಮಗೆ ತಿಳಿಸದಿದ್ದರೆ? ಒಂದು ಹೆಣ್ಣು ಹೇಗೆಲ್ಲಾ ಸಾಯಬಲ್ಲಳು ಅನ್ನುವುದಕ್ಕೆ ನಮ್ಮ ಪರಿಮಳ ಸಾಕ್ಷಿ. ನಿಮ್ಮ ಮಗಳು ಬರೀ ಪರಿಮಳ ಅಲ್ಲ, ನನ್ನ ಬಾಳ ಮಂದಿರ ಬೆಳಗಿ ಬಾಳಿದ ದೀಪ.

ಇಂತಹ ಎಷ್ಟೋ ದೀಪಗಳು ತೆರೆಮರೆಯಲ್ಲಿ ಕರಿಸಿದ್ದನಂಥಾ ಕಾಮುಕರಿಂದ ಆರಿಹೋಗಿವೆ. ನಾನು ಇದನ್ನು ನಿಮಗೆ ಹೇಳಲೇ ಬಾರದೆಂದು ಇದ್ದೆ, ಇಲ್ಲ... ನಿಮ್ಮ ಮಗಳಷ್ಟು ಗಟ್ಟಿತನ ಮತ್ತು ಒಳ್ಳೆಯತನ ನಂಗಿಲ್ಲ' ಅಂತ ಮಾತು ನಿಲ್ಲಿಸಿದರು.

ನಾನು, ಶಾರದ, ಸಿದ್ರಾಮ ಕಲ್ಲಾಗಿದ್ದೆವು! ಅನ್ನದ ಕೈ ಅನ್ನದಲ್ಲೇ ಇತ್ತು''.

'ಬೇಡ ಎಂದರೆ ನಾವು, ಸುಡದೇ ಬಿಡುವದೆ ನೋವು...' ರೇವಣಿ ಕಟ್ಟೆ ಮೇಲೆ ಹಾಡ್ತಿದ್ದ. ಅವನ ಕಂಠದಲ್ಲಿ ಸಂಕಟ ಮಡುಗಟ್ಟಿತ್ತು. ಬಹುಶಃ ಕಣ್ಣುಗಳು ನೀರಲ್ಲಿ ಮುಳುಗಿದ್ದವೇನೋ.

ಹಾಲೇಶಪ್ಪನವರಿಂದ ಅಳಿಯ ಹೇಳಿದ ಪರಿಮಳ ದುರಂತ ಕೇಳಿ ಕರಿಸಿದ್ದ ಅದುರಿಹೋದ! ಮಾತು ಗಂಟಲಲ್ಲಿಯೇ ಕರಗಿದವು. ಎದುರಿನ ಮೂವರು ಯಮದೂತರೇನೋ ಅನ್ನಿಸಿತ್ತು.

ಶಾರದಮ್ಮ ಮಗಳ ಹೆಣ ಎದುರಿಗಿದೆಯೇನೋ ಅನ್ನಂಗೆ ಅಳ್ತಾ ಇದ್ದರು. ಸಿದ್ರಾಮ ಹಲ್ ಹಲ್ ಕಡೀತಿದ್ದ. ಹಾಲೇಶಪ್ಪನವರ ಕಣ್ಣಲ್ಲಿ ನೀರು ಬರಲೋ ಬೇಡವೋ ಅಂತ ಕಣ್ಣ ಬಾಗಿಲಲ್ಲಿ ಜೋಕಾಲಿಯಾಡ್ತಾ ಇದ್ವು!

'ಮಗಳಲ್ಲಪ್ಪ ನಿಂಗೆ, ನಿನ್ ವಯಸ್ಸೇನು ಅವಳ ವಯಸ್ಸೇನೋ ಅವಾಗ. ನಾಯಿಗಳೂ ಮೇಲ್ ಬೀಳಕ್ ಹಿಂದೆ ಮುಂದೆ ಮಾಡ್ತವೆ. ನಮ್ ಮನೇಲಿ ಉಂಡು ತಿಂದು ಹೋಗ್ತಿದ್ದೆ, ದಾರಿಲ್ ಸಿಕ್ಕ ಹೂನ ಹೊಸಕಿ ಹಾಕಿದ ಪಾಪಿ ನೀನು, ನಿಂಗೆ ಏನು ಮಾಡಬೇಕು ಹೇಳು?' ಶಾರದಮ್ಮ ಹಿಡಿ ಶಾಪ ಹಾಕಿದರು.

ನಿಂಗೂ ಮದುವೆ ಆಗಿದೆ, ಮಕ್ಕಳಿವೆ. ಒಂಬತ್ತನೇ ಕ್ಲಾಸ್ ಓದ್ತಿರೋ ನಿನ್ ಮಗಳ್ ಯಾವನಾದ್ರೂ ಹಿಂಗ್ ಮಳೆಚಿಟ್ಟೆ ತರ ಹೊಸಕಿ ಹಾಕಿದರೆ ಏನ್ ಮಾಡ್ತಿಯಾ ಕರಿಸಿದ್ದ? ಹಾಲೇಶಪ್ಪನವರ ದನಿ ಜೋರಾಯಿತು.

ಕರಿಸಿದ್ದ ಅಕ್ಷರಶಃ ನಡುಗುತ್ತಿದ್ದ. ಕಣ್ ಮಂಜಾಗಂಗಾಗ್ತಿದ್ವು.

'ಎಲ್ಲಾ ಮುಗಿದು ಮದ್ವೆಯಾಗಿ ಹೋಗೋ ಸಾವಿರಾರು ಹೆಣ್ಣುಮಕ್ಕಳಿದ್ದಾರೆ. ಅವರ ಹಿಂದೆ ನಿಮ್ಮಂಥಾ ಪಾಪಿಗಳ ನೆರಳಿದ್ರೆ ಗಂಡನ ಮನೇಲಿ ನೆಮ್ಮದಿಯಿಂದ ಬಾಳ್ತಾರೇನ್ರೋ' ಅಂದವನೇ ಸಿದ್ರಾಮ ಬುಲ್ಡೆಗೆ ಒಂದ್ ಎಡಗೈಲಿ ಬಿಟ್ಟ. ಕರಿಸಿದ್ದ ಕಬ್ಬಿಣದ ಕುರ್ಚಿ ಕೆಡವಿಕೊಂಡು ಬಿದ್ದ.

ಓಡಿ ಬಂದವರೇ ಹಾಲೇಶಪ್ಪನವರು, 'ಬೇಡಪ್ಪ ಕೈ ಮಾಡಬೇಡ. ದೇವರೇ ಅವನಿಗೆ ಶಿಕ್ಷೆ ಕೊಡ್ತಾನೆ ಬಿಡು' ಅಂದು ತಡೆದರು.

ರೇವಣಿ ಬಂದು ಇಣುಕಿ ನೋಡಿದ, ಮತ್ತೆ ಬೇರೆ ಹಾಡಿಗೆ ಹೋದ.

'ನಿಮ್ಮನೆಗೆ ಬಂದು ನೀ ಮಾಡಿದ ಘನಂದಾರಿ ಕೆಲಸ ನಿನ್ನ ಹೆಂಡತಿ ಮಕ್ಕಳ ಎದುರು ಹೇಳಿದರೆ ನಿನ್ನ ಮರ್ಯಾದೆ ಏನು? ನಿನ್ನ ಗೌರವ ಏನು? ಗೊತ್ತಾ? ನಿನ್ನ ಹೆಂಡತಿನೂ ಬೇರೆ ಮನೆಯಿಂದ ಬಂದವಳು, ಅವಳಿಗೂ ಅವಳ ಊರಲ್ಲಿ ಯಾವನಾದ್ರೂ... ಅಂತ ಕೇಳಿದ್ರೆ ನೀ ಮಚ್ ತಗಂಡ್ ಕಡಿತಿಯೋ ಅಥವಾ...' ಎಂದು ಶಾರದಮ್ಮ ಮಗಳ ಫೋಟೋ ನೋಡುತ್ತಲೇ ಅಳುತ್ತಾ ಹೇಳಿದರು.

ತಲೆ ಎತ್ತಲಿಲ್ಲ ಕರಿಸಿದ್ದ.

'ಅಳಿಯ ಹೇಳದಿದ್ದರೆ ನಮಗೀ ವಿಚಾರ ಗೊತ್ತೇ ಆಗುತ್ತಿರಲಿಲ್ಲ. ಇಷ್ಟು ವರ್ಷ ನಿಂಗೆ ಮನೆ ಮಗನಂಗೆ ಗೌರವ ಕೊಟ್ಟು ನಮ್ಮ ಪರಿಮಳಂಗೆ ಅವಮಾನ ಮಾಡಿದ್ವಲ್ಲೋ...' ಅಂತ ಈಗ ಹಾಲೇಶಪ್ಪನವರು ದುಃಖದ ಕಟ್ಟೆ ಒಡೆದು ಅತ್ತುಬಿಟ್ಟರು.

ಕರಿಸಿದ್ದ ಉದ್ದಕ್ಕೆ ಗಂಡ ಹೆಂಡತಿಗೆ ಅಡ್ಡ ಬಿದ್ದ. ಕಣ್ಣಲ್ಲಿ ನೀರಿದ್ದವೇನೋ... ಮಾತಂತು ಸತ್ತೇ ಹೋಗಿತ್ತು. ಜೋರು ಉಸಿರು ಇಡೀ ಮನೇಲಿ ಕೇಳಿಸ್ತಾ ಇತ್ತು.

ಪಂಚೆ ಸೆರಗಿಂದ ಕಣ್ಣ ಒರೆಸಿಕೊಳ್ಳುತ್ತಲೇ 'ಈ ಕಸನ ಎತ್ತಿ ಹೊರ ಹಾಕೋ ಸಿದ್ರಾಮ, ನಾಳೆ ಇಡೀ ಮನೇನ ಗೋಮೂತ್ರ ಹಾಕಿ ಶುದ್ಧಿ ಮಾಡ್ಸು , ಹಂಗೇ ಐನ್ನಾರ ಬರಹೇಳು ಪರಿಮಳ ಪೂಜೆ ಮಾಡಿ ಕೈಮುಗಿಯನ' ಅಂದ್ರು. ನಾಯಿಗೂ ಕಡೆಯಾಗಿ ದರದರಾಂತ ಎಳೆದು ಚಪ್ಪಲಿ ಬಿಡೋ ಜಾಗದಲ್ಲಿ ಕರಿಸಿದ್ದನ್ನ ಬಿಸಾಕಿಬಿಟ್ಟ.

ರೇವಣಿ ಹಾಡ್ತಾನಾ ಇದ್ದ. ಕಣ್ಣಲ್ಲಿ ನೀರಿದ್ದವು.

ಇಡೀ ಮನೆ ಮೌನ ಮೌನ.

ರಾತ್ರಿಯಾಯಿತು, ಹಗಲಾಯಿತು. ಮೂರುದಿನಗಳು ಮುಗಿದುಹೋದವು. ಮನೆ ತುಂಬಾ ಗಂಧ, ಲೋಬಾನ. ಊದುಗಡ್ಡಿ ವಾಸನೆ ತುಂಬಿ ತುಳುಕುತ್ತಿತ್ತು. ಪೂಜೆ ಜೋರಾಗಿತ್ತು. ಅಳಿಯ ಮತ್ತು ಮೊಮ್ಮಕ್ಕಳನ್ನು ನೋಡಿ ಶಾರದಮ್ಮಗೆ ಮಗಳು ಪರಿಮಳನ ನೋಡಿದಷ್ಟೇ ಸಮಾಧಾನ.

ಹಾಲೇಶಪ್ಪನವರ ಮನೆಯಿಂದ ಹೊರಬಿದ್ದ ಕರಿಸಿದ್ದ ಅವತ್ತು ರಾತ್ರಿಯಿಂದ ಬರೀ ಕೆಮ್ಮು, ವಾಂತಿ ಮಾಡಿ ಸುಸ್ತಾಗಿಬಿಟ್ಟಿದ್ದ ಎಂದು ದಾವಣಗೆರೆ ಸಿಟಿ ಸೆಂಟ್ರಲ್ ಆಸ್ಪತ್ರೆಗೆ ಸೇರಿಸಿದ್ರು. ಮೂರು ದಿನ ರಕ್ತ ವಾಂತಿ ಮಾಡಿದನೆಂದು, ಫುಡ್ ಅಲರ್ಜಿಗೆ ಟ್ರೀಟ್‌ಮೆಂಟ್ ನಡೆಯುವಾಗಲೇ ಹೋಗಿಬಿಟ್ಟ ಅಂತ ಸುದ್ದಿ ಬಂತು. ಕೊರೊನಾ ತಂಡ ಅವರ ಮನೆ ಎಲ್ಲಾ ಜಾಲಾಡಿ ಅವನ ಹೆಣ ಮನೆಗೆ ವಾಪಾಸ್ ಕೊಡಲು ಮೀನಮೇಷ ಮಾಡಿದ್ದೆ ಮತ್ತೆ ಇದೇ ಹಾಲೇಶಪ್ಪನವರು ಹೋಗಿ ಶಿಫಾರಸು ಮಾಡಿ ಹೆಣ ಕೊಡಿಸಿದ್ರು.

ಮನೆ ತುಂಬಾ ಹೊಸ ಬೆಳಕಿತ್ತು. ಲ್ಯಾಬ್ ಟೆಕ್ನಿಷಿಯನ್ ಸಿದ್ರಾಮ ಅಕ್ಕನ ಫೋಟೋ ಮುಂದೆ ಕೈ ಮುಗಿದು ನಿಂತೇ ಇದ್ದ. ರೇವಣಿ ಅವತ್ತು 'ಉಳಿದ ಉಪ್ಪಿಟ್ಟು ನಾಯಿಗೆ ಹಾಕದೇ ಗುಂಡಿ ತೆಗೆದು ಹೂಣಾಕು' ಅಂದ ಅಣ್ಣನ ಮಾತಿನ ಅರ್ಥ ಈಗ ಆಗಿತ್ತು. ಹಾಡುತ್ತಲೇ ಪರಿಮಳ ಮಕ್ಕಳ ಜೊತೆ ಆಡುತ್ತಾ ಇದ್ದ. ಅಳಿಯನ ಮೌನ ಮುರಿಯಲು ಹಾಲೇಶಪ್ಪನವರೇ, 'ಪರಿಮಳನ ಆತ್ಮಕ್ಕೆ ಶಾಂತಿ ಸಿಕ್ತು ಬನ್ನಿ ಊಟ ಮಾಡನ... ಶಾರೂ ಎಲೆ ಹಾಕು' ಅಂತ ಎಬ್ಬಿಸಿದರು.

ಶಾರದಮ್ಮ ಸಮಾಧಾನದಿಂದ ಮಗಳ ಮುಖ ನೋಡುತ್ತಲೇ ಬಡಿಸಲು ಅಣಿಯಾದರು, ಮಲ್ಲಿಗೆ ಮುಡಿದ ಪರಿಮಳ ಫೋಟೋದಲ್ಲಿಯೇ ನಕ್ಕಂತಾಯಿತು!

ಪ್ರತಿಕ್ರಿಯಿಸಿ: feedback@sudha.co.in